**ಶ್ರೀ ಎಂ ನಾಗರಾಜು, ಮಾನ್ಯ, ಶಾಸಕರು, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು ಇವರ ದಿನಾಂಕ: 18-12-2025ರಂದು ಕಲಾಪದಲ್ಲಿನ ಶೂನ್ಯ ವೇಳೆಯಲ್ಲಿನ ಪ್ರಸ್ತಾವನೆಗೆ ಉತ್ತರಿಸುವ ಬಗ್ಗೆ**

**ಪ್ರಶ್ನೆ:**

ದಿನಾಂಕ:15-12-2025 ರಂದು "ಶಿಕ್ಷಣ ದೇಗುಲದಲ್ಲಿ ಸೌಲಭ್ಯಗಳ ಸವಾಲು" ಎಂಬ ಶೀರ್ಷಿಕೆಯಡಿ ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ಸುದ್ದಿ ವರದಿಯಾಗಿರುತ್ತದೆ. " ಖಾನಾಪುರ ಪಟ್ಟಣದ ವಿದ್ಯಾನಗರದಲ್ಲಿ ಸರ್ಕಾರಿ ಪಿಯು ಕಾಲೇಜು ಮೂಲ ಸೌಕರ್ಯಗಳ ಕೊರತೆಯಿಂದ ತತ್ತರಿಸಿ ಹೋಗಿದೆ. ಬಡ, ಹಿಂದುಳಿದ ಹಾಗೂ ಗ್ರಾಮೀಣ ಭಾಗದ ವಿದ್ಯಾರ್ಥಿಗಳೇ ಹೆಚ್ಚಾಗಿ ವ್ಯಾಸಂಗ ಮಾಡುತ್ತಿರುವ ಈ ಕಾಲೇಜಿನಲ್ಲಿ ಸದ್ಯ 600 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲೆ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗಗಳಲ್ಲಿ ಓದುತ್ತಿದ್ದಾರೆ. ಆದರೆ, ಬೋಧನೆಗೆ ಕೇವಲ ಮೂರು ಕೊಠಡಿಗಳು ಮಾತ್ರ ಲಭ್ಯವಿದೆ. ಪ್ರಸಕ್ತ ವರ್ಷ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದರೂ, ಕಾಲೇಜಿನ ಮೂಲಸೌಕರ್ಯ ಪಾತಾಳದಲ್ಲಿದೆ. ಇಲ್ಲಿ ಪ್ರಾಂಶುಪಾಲರು, 8 ಉಪನ್ಯಾಸಕರು ಮತ್ತು ಗ್ರೂಪ್-ಡಿ ಸಿಬ್ಬಂದಿ ಹುದ್ದೆಗಳು ಖಾಲಿ ಇವೆ. ಕೇವಲ ನಾಲ್ವರು ಖಾಯಂ ಉಪನ್ಯಾಸಕರು ಇಷ್ಟೊಂದು ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳಿಗೆ ಪಾಠ ಮಾಡುವ ಅನಿವಾರ್ಯತೆ ಎದುರಿಸುತ್ತಿದ್ದಾರೆ.

ಒಟ್ಟು ಆರು ಕೊಠಡಿಗಳಿದ್ದರೂ, ಕಛೇರಿ ಹಾಗೂ ಪ್ರಾಚಾರ್ಯರ ಬಳಕೆಗೆ ಒಂದು ಕೊಠಡಿ ಹೋಗಿದೆ. ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ, ಪ್ರಯೋಗಾಲಯ ಮತ್ತು ಗಣಕಯಂತ್ರ ಬೋಧನೆಗಾಗಿ ತಲಾ ಒಂದೊಂದು ಕೊಠಡಿಗಳನ್ನು ಬಳಸಲಾಗುತ್ತಿದೆ. ಕಾಲೇಜಿಗೆ ಕಛೇರಿ, ಪ್ರಾಚಾರ್ಯರ ಕೊಠಡಿ, ವಿಜ್ಞಾನ ಲ್ಯಾಬ್ ಗಳು, ಸಭಾಗೃಹ, ಗ್ರಂಥಾಲಯ, ಕ್ರೀಡಾ ಕೊಠಡಿ ಮತ್ತು ಮಹಿಳಾ ವಿಶ್ರಾಂತಿ ಕೊಠಡಿ ಸೇರಿದಂತೆ ಎಲ್ಲಾ ಮೂಲಸೌಕರ್ಯಗಳ ಕೊರತೆ ಇದೆ" ಎಂದು ಪ್ರಕಟವಾಗಿದ್ದು, ಪ್ರಯುಕ್ತ ಸದರಿ ಸರ್ಕಾರಿ ಕಾಲೇಜಿಗೆ ಅನುದಾನ ಒದಗಿಸಿ ತುರ್ತಾಗಿ ಹೊಸ ಕೊಠಡಿಗಳನ್ನು ನಿರ್ಮಿಸಲು ಸಂಬಂಧಪಟ್ಟ ಅಧಿಕಾರಿಗಳೀಗೆ ಸೂಚನೆ ನೀಡುವಂತೆ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರನ್ನು ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಸರ್ಕಾರಿ ಪದವಿ ಪೂರ್ವ ಕಾಲೇಜು, ಖಾನಾಪುರ, ಬೆಳಗಾವಿ ಜಿಲ್ಲೆ – ಈ ಕಾಲೇಜಿಗೆ ಒದಗಿಸಲಾದ ಮೂಲಭೂತ ಸೌಲಭ್ಯಗಳ ವಿವರ ಈ ಕೆಳಕಂಡಂತಿದೆ.

1. 2016-17ನೇ ಸಾಲಿನಲ್ಲಿ ಆರ್‌ಐಡಿಎಫ್-22ರ ಯೋಜನೆಯಡಿ ರೂ 50.55 ಲಕ್ಷ ಅಂದಾಜು ಮೊತ್ತದಲ್ಲಿ 02 ತರಗತಿ ಕೊಠಡಿ 02 ಶೌಚಾಲಯ ನಿರ್ಮಾಣ ಕಾಮಗಾರಿ ಅನುಷ್ಠಾನಗೊಂಡಿರುತ್ತದೆ.
2. 2022-23ನೇ ಸಾಲಿನ ಹೊಸ ಕೊಠಡಿ ನಿರ್ಮಾಣ ಯೋಜನೆಯಡಿ (ವಿವೇಕ) ರೂ 49.50 ಲಕ್ಷ ಅನುದಾನದಲ್ಲಿ 02 ತರಗತಿ ಕೊಠಡಿ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದ್ದು, ಕಾಮಗಾರಿ ಹಸ್ತಾಂತರಗೊಂಡಿರುತ್ತದೆ.
3. 2022-23ನೇ ಸಾಲಿನಲ್ಲಿ ಸದರಿ ಕಾಲೇಜಿಗೆ 45 ರಿವರ್ಸಿಬಲ್ ಡೆಸ್ಕ್‌ಗಳನ್ನು ಸರಬರಾಜು ಮಾಡಲಾಗಿರುತ್ತದೆ.
4. 2023-24ನೇ ಸಾಲಿನ ರಾಜ್ಯ ಆಯವ್ಯಯ ಕಂಡಿಕೆ-90ರಲ್ಲಿ ರಾಜ್ಯದ ಮಹತ್ವಕಾಂಕ್ಷಿಗಳ ತಾಲೂಕುಗಳಲ್ಲಿನ ವಿಜ್ಞಾನ ಸಂಯೋಜನೆಯನ್ನು ಹೊಂದಿರುವ ಆಯ್ದ 60 ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನು ಆದರ್ಶ ವಿಜ್ಞಾನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳನ್ನಾಗಿ

ಉನ್ನತೀಕರಿಸಲಾಗಿದ್ದು. ಈ 60 ಕಾಲೇಜುಗಳಲ್ಲಿ ಡಿಡಿ-0251, ಸರ್ಕಾರಿ ಪದವಿ ಪೂರ್ವ ಕಾಲೇಜು, ಖಾನಾಪುರ, ಬೆಳಗಾವಿ ಜಿಲ್ಲೆ. ಈ ಕಾಲೇಜು ಸಹ ಒಳಗೊಂಡಿರುತ್ತದೆ.

- ಸದರಿ ಕಾಲೇಜಿಗೆ ಇಲಾಖೆಯಿಂದ 17 ALL IN ONE COMPUTERS ಮತ್ತು 2 INTERACTIVE DISPLAY BOARD ಗಳನ್ನು ಸರಬರಾಜು ಮಾಡಲಾಗಿದೆ.
- ಆದರ್ಶ ಕಾಲೇಜುಗಳನ್ನಾಗಿ ಪರಿವರ್ತಿಸಲಾದ ಕಾಲೇಜುಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಸರಿಪಡಿಸಿಕೊಳ್ಳಲು ಅಂದರೆ ಕಟ್ಟಡ ರಿಪೇರಿ, ಶೌಚಾಲಯ ರಿಪೇರಿ, ನೀರಿನ ವ್ಯವಸ್ಥೆ ಕಲ್ಪಿಸಿಕೊಳ್ಳಲು, ವಿದ್ಯುತ್ ಸಂಪರ್ಕ ಪಡೆದುಕೊಳ್ಳಲು, SAFETY DOOR ಅಳವಡಿಸಿಕೊಳ್ಳಲು ಇನ್ನು ಇತರೆ ಕಾರ್ಯಗಳಿಗಾಗಿ ರೂ.9,08,000/-ಗಳಂತೆ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

5. ಸರ್ಕಾರಿ ಪದವಿ ಪೂರ್ವ ಕಾಲೇಜು ಖಾನಾಪುರದಲ್ಲಿ 01 ಪ್ರಾಂಶುಪಾಲರ ಹುದ್ದೆ ಮಂಜೂರಿದ್ದು, ಖಾಲಿ ಇರುತ್ತದೆ. ಮುಂಬರುವ ಸಾಲಿನ ವರ್ಗಾವಣೆ ಅಥವಾ ಪ್ರಾಂಶುಪಾಲರ ಬಡ್ತಿಯ ಸ್ಥಳನಿಯುಕ್ತಿ ಕೌನ್ಸೆಲಿಂಗ್‌ನಲ್ಲಿ ಭರ್ತಿ ಮಾಡಲಾಗುವುದು. ಸದರಿ ಕಾಲೇಜಿನಲ್ಲಿ, 13 ಉಪನ್ಯಾಸಕರ ಹುದ್ದೆಗಳು ಮಂಜೂರಾಗಿದ್ದು, 04 ಖಾಯಂ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ಇನ್ನುಳಿದ 09 ಖಾಲಿ ಹುದ್ದೆಗಳ ಎದುರಾಗಿ ಅಥಿತಿ ಉಪನ್ಯಾಸಕರ ಸೇವೆಯನ್ನು ಪಡೆಯಲಾಗುತ್ತಿದೆ.
6. ಸರ್ಕಾರಿ ಪದವಿ ಪೂರ್ವ ಕಾಲೇಜು ,ಖಾನಾಪುರ ಇಲ್ಲಿ 01 ದ್ವಿತೀಯ ದರ್ಜೆ ಸಹಾಯಕರ ಹುದ್ದೆ ಮಂಜೂರಿದ್ದು ಕಾರ್ಯ ನಿರ್ವಹಿಸುತ್ತಿದ್ದಾರೆ. ಬೋಧಕೇತರ ' ಡಿ' ಗುಂಪು ಹುದ್ದೆ ಖಾಲಿ ಇದ್ದು ಕಾಲೇಜಿನ ದಿನನಿತ್ಯದ ಕೆಲಸ ಕಾರ್ಯಗಳಿಗೆ ತೊಂದರೆಯಾಗದಂತೆ ಕಾಲೇಜು ಅಭಿವೃದ್ಧಿ ಸಮಿತಿಯವತಿಯಿಂದ ಗೌರವಧನ ಆಧಾರದ ಮೇಲೆ ಗ್ರೂಪ್-ಡಿ ಸಿಬ್ಬಂದಿಯ ಸೇವೆಯನ್ನು ಪಡೆದುಕೊಂಡಿರುತ್ತಾರೆ.

ಇಲಾಖೆಗೆ ಲಭ್ಯವಾಗುವ ಅನುದಾನದ, ವಿದ್ಯಾರ್ಥಿಗಳ ಸಂಖ್ಯೆ ಮತ್ತು ಮೂಲಭೂತ ಸೌಲಭ್ಯಗಳ ಅವಶ್ಯಕತೆಯ ಆಧಾರದ ಮೇಲೆ , ಮೇಲ್ಕಂಡಂತೆ, ಸದರಿ ಕಾಲೇಜಿಗೆ ಮೂಲಭೂತ ಸೌಲಭ್ಯಗಳಣ್ನು ಒದಗಿಸಲಾಗಿದ್ದು, 2026-27ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಗೆ ಒದಗಿಸಲಾಗುವ ಅನುದಾನದಲ್ಲಿ, ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಗತ್ಯತೆ ಮತ್ತು ಆದ್ಯತೆ ಮೇರೆಗೆ ಕ್ರಿಯಾ ಯೋಜನೆಯನ್ನು ರೂಪಿಸಿ ಕ್ರಮವಹಿಸಲಾಗುವುದು.

**ಇಪಿ 443 ಯೋಸಕ 2025**

(ಎಸ್. ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**